The amount required for these works is Rs. 11.50 lakhs. About 7 minor irrigation works have been taken up for repairs. They are as follows.

> "Repairs to vented dam at Kattajaru in Kaniyar village Rs. 46,274; repairs to Payanthimegru vented dam in Bettampady Rs. 24,600 ; Special repairs to Kallapapu vented dam in Puttur taluk Rs. 13,000 repairs to flood gates Gundi anicut Rs. 19,320 repairs to vented dam in Panjigunta in Kedambady village Rs. 13,363 repairs to Lift Irrigation scheme at Yentithadka Rs. 17,396 and repairs to survey Lift Irrigation scheme 3,132..."

ಇದಾದ ಮೇಲೆ ತಕ್ಷಣವೇ ರಿಪೇರಿಯಾಗಬೇಕಾದ ಕೆಲಸಕಾರ್ಯಗಳ ಬಗ್ಗೆ ಅಂದಾಜನ್ನು ತಯಾರು ಮಾಡಿದ್ದಾರೆ. ಅದಕ್ಕಾಗಿ ೧,೪೩,೩೫೭ ರೂಪಾಯಿಗಳು ಬೇಕೆಂದು ಹೇಳಿದ್ದಾರೆ. ನಂತರ ಅನ್ ಗೋಯಿಂಗ್ ವರ್ಕ್ಸ್ ೨೨ ಕಾಮಗಾರಿಗಳನ್ನು ತೆಗೆದುಕೊಂಡಿದ್ದು ಅದಕ್ಕಾಗಿ ೬.೩೭ ರೂಪಾಯಿಗಳನ್ನು ಖರ್ಚು ಮಾಡಿ ರಿಪೇರಿ ಮಾಡಲಾಗಿದೆ. ಇನ್ನೂ ಕೆಲವು ಕಾಮಗಾರಿಗಳು ರಿಪೇರಿಯಾಗಬೇಕಾಗಿದ್ದು, ಇನ್ನು ಹದಿನೈದು ದಿವಸಗಳಲ್ಲಿ ಈ ರೀತಿಯ ಕಾಮಗಾರಿಗಳನ್ನು ಜಿಲ್ಲಾ ಪರಿಷತ್ತಿಗೆ ವರ್ಗಾವಣೆ ಮಾಡಲಿತ್ತಿದ್ದೇವೆ. ಹೇಗೂ ಜಿಲ್ಲಾಪರಿಷತ್ತು ನಿಮ್ಮ ಕೈಯ್ಯಲ್ಲೇ ಇದೆ. ನಿವಂಗೇ ಹಣವನ್ನು ಕೊಡುತ್ತೇವೆ. ನೀವೇ ಮಾಡಿಕೊಳ್ಳಿ.

ಶ್ರೀ ವಿನಯಕುಮಾರ್ ಸೊರಕೆ.—ಕಳೆದ ೧೯೮೬-೮೭ನೇ ಸಾಲಿನಲ್ಲಿ ಕೆಲವು ಹೊಸ ಕಾಮಗಾರಿಗಳನ್ನು ಬಡ್ಜೆಟ್ಟಿನಲ್ಲಿ ಸೇರಿಸಲಾಗಿತ್ತು. ಮಾನ್ಯ ಮಂತ್ರಿಗಳು ರೀಪೇರಿಯಾಗುವ ಕಾಮಗಾರಿಗಳ ಬಗ್ಗೆ ೬ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂದು ಹೇಳಿದ್ದಾರೆ. ಕಳೆದ ಸಾಲಿನಲ್ಲಿ ಹೊಸದಾಗಿ ತೆಗೆದುಕೊಂಡಂತಹ ಕಾಮಗಾರಿಗಳನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ? ಅವುಗಳನ್ನು ಪ್ರಾರಂಭ ಮಾಡುವಂತಹ ಅವಶ್ಯಕತೆ ಇದೆಯೋ ಅಥವಾ ಇಲ್ಲವೋ ಎಂಬುದನ್ನು ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಹೆಚ್. ಡಿ. ದೇವೇಗೌಡ.—ಈ ಸಾಲಿನ ಬಡ್ಜೆಟ್ಟನ್ನೂ ಮಾನ್ಯ ಸಭೆಯು ಮುಂದೆ ಮಂಡಿಸಲಾಗಿದೆ. ಅದರಲ್ಲಿ ಯಾವ್ಯಾವ ಕೆಲಸಕಾರ್ಯಗಳಿಗೆ ನವ್ಯ ವ್ಯಾಪ್ತಿಯಲ್ಲಿ ಬರುತ್ತವೆಯೋ ಅವುಗಳನ್ನು ನಾವು ತೆಗೆದುಕೊಳ್ಳುತ್ತೇವೆ. ಜಿಲ್ಲಾಪರಿಷತ್ತಿನವರು ತೆಗೆದುಕೊಳ್ಳಬೇಕಾಗಿರುವಂತಹ ಕೆಲಸಕಾರ್ಯಗಳನ್ನು ಅವರಿಗೆ ವರ್ಗಾವಣೆ ಮಾಡುತ್ತೇವೆ. ಅವರು ಆ ಕೆಲಸಕಾರ್ಯಗಳನ್ನು ತೆಗೆದುಕೊಂಡು ಮಾಡುತ್ತಾರೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಕೃಷಿ ಬೆಲೆಗಳು

೧೩೦೯. **ಶ್ರೀ ಆರ್. ವೆಂಕಟರಾಮಯ್ಯ** (ಮುಳಬಾಗಿಲು).—ಮಾನ್ಯ ಕೃಷಿ ಹಾಗೂ ತೋಟಗಾರಿಕಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೃಷಿ ಬೆಲೆಗಳಿಗೆ ಸಂಬಂಧಿಸಿದ ಬಂಗಾರಪ್ಪ ಸಮಿತಿ, ಪ್ರಕಾಶ್ ಸಮಿತಿ ಮತ್ತು ಶಂಕರಿ ಕೊಪ್ಪ ಸಮಿತಿಗಳ ವರದಿಗಳನ್ನು ಸರ್ಕಾರವು ಸ್ವೀಕರಿಸಿದೆಯೇ,

ಆ) ಸದನದಲ್ಲಿ ಈ ವರದಿಗಳನ್ನು ಮಂಡಿಸಲಾಗುವುದೇ,

ಇ) ಈ ಸಮಿತಿಗಳ ಶಿಫಾರಸ್ಸುಗಳನ್ನು ಸರ್ಕಾರವು ಒಪ್ಪಿದೆಯೆ,

ಈ) ಹಾಗಿಲ್ಲದಿದ್ದರೆ ಇದರ ಬಗ್ಗೆ ಸರ್ಕಾರದ ನಿಲುವೇನು ?

ಶ್ರೀ ಬಸವರಾಜ್ ಪಾಟೀಲ್ ಅನ್ವರಿ (ಕೃಷಿ ಮತ್ತು ತೋಟಗಾರಿಕೆ ರಾಜ್ಯ ಸಚಿವರು)

ಅ) ಅಂದಿನ ಕಂದಾಯ ಮತ್ತು ಕೃಷಿ ಮಂತ್ರಿಗಳಾದ ಶ್ರೀ ಎಸ್. ಬಂಗಾರಪ್ಪ ಅಂದಿನ ಕೃಷಿ ರಾಜ್ಯ ಸಚಿವರಾದ ಶ್ರೀ ಎಂ. ಪಿ. ಪ್ರಕಾಶ್ ಮತ್ತು ಶ್ರೀ ಶಂಕರಿಕೊಪ್ಪ ಇವರುಗಳ ನೇತೃತ್ವದ ಪರಿಣಿತ ಸಮಿತಿಗಳ ವರದಿಗಳನ್ನು ಸ್ವೀಕರಿಸಲಾಗಿದೆ.

ಆ) ಈ ಸಮಿತಿಗಳನ್ನು ರಚಿಸಿರ ವಿಚಾರಣಾ ಆಯೋಗಗಳ ಕಾಯ್ದೆಯ ಪ್ರಕಾರವಾಗಲಿ ಅಥವಾ ಶಾಸನಬದ್ಧ ನಿಯಮದ ಪ್ರಕಾರವಾಗಲಿ ರಚಿಸದೇ ಇರುವುದರಿಂದ ಈ ವರದಿಗಳನ್ನು ಸದನದಲ್ಲಿ ಮಂಡಿಸುವ ಅವಶ್ಯಕತೆ ಉದ್ಭವಿಸುವುದಿಲ್ಲ.

ಇ) ಪರಿಶೀಲನೆಯಲ್ಲಿದೆ.

ಈ) ಉದ್ಭವಿಸುವುದಿಲ್ಲ.

ಸರ್ಕಾರಿ ಪ್ರಾಥಮಿಕ ಹಾಗೂ ಸೆಕೆಂಡರಿ ಶಾಲೆಗಳಲ್ಲಿ ಪೀಠೋಪಕರಣಗಳ ಕೊರತೆ

೯೮೬. ಶ್ರೀ ಸಿ. ಕಣ್ಣನ್ (ಶಾಂತಿನಗರ) ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ಬೆಂಗಳೂರು ಜಿಲ್ಲೆಯ ಸರ್ಕಾರಿ ಪ್ರಾಥಮಿಕ ಮತ್ತು ಕೆಲವು ಪ್ರೌಢ ಶಾಲೆಗಳಲ್ಲಿ ಸಾಕಷ್ಟು ಪೀಠೋಪಕರಣಗಳು ಅಂದರೆ ಸ್ಪೆಷಲ್ ಬೆಂಚುಗಳು ಮುಂತಾದವುಗಳು ಇಲ್ಲದೆ ಮಕ್ಕಳು ನೆಲದ ಮೇಲೆ ಕೂರುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ,

ಆ) ಅಗತ್ಯವಿರುವ ಕಡೆ ಪೀಠೋಪಕರಣಗಳನ್ನು ಒದಗಿಸಲು ಸರ್ಕಾರವು ಶೀಘ್ರ ಕ್ರಮ ತೆಗೆದು ಕೊಳ್ಳುವುದೇ ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಅ) ಬಂದಿದೆ. ಕೆಲವು ಶಾಲೆಗಳಲ್ಲಿ ಸಾಕಷ್ಟು ಪೀಠೋಪಕರಣಗಳಿಲ್ಲ.

ಆ) ಸರ್ಕಾರ ಒದಗಿಸುವ ಹಣದ ಜೊತೆಗೆ ಶಾಲಾಭಿವೃದ್ಧಿ ಸಮಿತಿಗಳಿಂದ ಹಾಗೂ ದಾನಿಗಳಿಂದ ಪೀಠೋಪಕರಣ ಮತ್ತು ಪೀಠೋಪಕರಣಗಳನ್ನು ಪಡೆದು ಹಂತ ಹಂತವಾಗಿ ಶಾಲೆಗಳಿಗೆ ಒದಗಿಸಲಾಗುತ್ತಿದೆ.

ಖಾಸಗಿ ಶಾಲೆ ಹಾಗೂ ಕಾಲೇಜುಗಳಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಗಳ ಮಕ್ಕಳಿಗೆ ಪ್ರವೇಶ ನಿರಾಕರಣೆ

೯೭೦ ಶ್ರೀ ಹೆಚ್. ಕೆ. ಕುಮಾರಸ್ವಾಮಿ (ಬೇಲೂರು).—ಮಾನ್ಯ ಶಿಕ್ಷಣ ಮಂತ್ರಿಗಳು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಖಾಸಗಿ ಶಾಲಾ ಕಾಲೇಜುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗಗಳ ಮಕ್ಕಳಿಗೆ ಪ್ರವೇಶ ನಿರಾಕರಿಸುತ್ತಿರುವ ವರದಿಗಳು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಪ್ರವೇಶ ನಿರಾಕರಿಸುವ ಸಂಸ್ಥೆಗಳ ಮೇಲೆ ಕೈ ಗೊಂಡ ಕ್ರಮಗಳೇನು ? ಹಾಗೂ ಪ್ರವೇಶ ಕೊಡುವಂತೆ ಸರ್ಕಾರದವರು ಸುತ್ತೋಲೆ ಹೊರಡಿಸಿದ್ದಾರೆಯೇ ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳು).—

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.